KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2024/ 1269 ದಿನಾಂಕ: 10/01/2024

## ಸುತ್ತೋಲೆ

ವಿಷಯ : ಜನೇವರಿ/ಫೆಬ್ರುವರಿ–2024 ರಲ್ಲಿ ಜರಗುವ ರಾಷ್ಟ್ರೀಯ ಶಿಕ್ಷಣ ನೀತಿ–2020 (NEP) ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳ 1, 3 ಮತ್ತು 5 ನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ : 1) ತಿದ್ದುಪಡಿ ಅಧಿಸೂಚನೆ.ನಂ/ಕವಿವಿ/ಪರೀಕ್ಷಾ/ಜಿಎಡಿ/2023/1213, ದಿನಾಂಕ:19/12/2023.
2) ಪರಿಷ್ಕೃತ ಸುತ್ತೋಲೆ ನಂ.ಕವಿವಿ/ಪರೀಕ್ಷಾ/ಜಿಎಡಿ/2023/1235, ದಿನಾಂಕ:29/12/2023.
3) ಪರಿಷ್ಕೃತ ಸುತ್ತೋಲೆ ನಂ.ಕವಿವಿ/ಪರೀಕ್ಷಾ/ಜಿಎಡಿ/2023/1260, ದಿನಾಂಕ:08/01/2024.
4) ಸುತ್ತೋಲೆ ನಂ.ಕವಿವಿ/ಪರೀಕ್ಷಾ/ಜಿಎಡಿ/2023/1265, ದಿನಾಂಕ:09/01/2024.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಜನೇವರಿ/ಫೆಬ್ರುವರಿ–2024 ರಲ್ಲಿ ಜರಗುವ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳ 1, 3 ಮತ್ತು 5 ನೇ ಸೆಮೆಸ್ಟರ್ ರೆಗ್ಯೂಲರ್/ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕವನ್ನು ತುಂಬಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ರಾಷ್ಟ್ರೀಯ ಶಿಕ್ಷಣ ನೀತಿ–2020 (NEP) ರ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳ 3 ಅಥವಾ 5 ನೇ ಸೆಮಿಸ್ಟರ್‌ನಲ್ಲಿ ರೆಗ್ಯೂಲರ್ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವು ಯು.ಯು.ಸಿ.ಎಂ.ಎಸ್. ತಂತ್ರಾಂಶದ ತಾಂತ್ರಿಕ ಕಾರಣಗಳಿಂದಾಗಿ 1 ಅಥವಾ 3 ನೇ ಸೆಮಿಸ್ಟರ್‌ಗಳ ಫಲಿತಾಂಶ/ಮರು ಮೌಲ್ಯಮಾಪನದ ಫಲಿತಾಂಶ ಪ್ರಕಟವಾಗಿರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಈಗ 1, 3 ಮತ್ತು 5 ನೇ ಸೆಮಿಸ್ಟರ್ ಪರೀಕ್ಷಾ ಫಾರ್ಮ/ಶುಲ್ಕವನ್ನು SBI Online Portal ಮುಖಾಂತರ ಭರಿಸಲು ತಿಳಿಸಲಾಗಿದೆ. ಮುಂದುವರೆದು, ಸದರಿ ವಿದ್ಯಾರ್ಥಿಗಳ ಹಿಂದಿನ ಸೆಮಿಸ್ಟರಗಳ ಪರೀಕ್ಷಾ ಫಲಿತಾಂಶ ಉತ್ತೀರ್ಣವಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಭರಿಸಿದ ಪರೀಕ್ಷಾ ಶುಲ್ಕವನ್ನು ಮರುಪಾವತಿಗಾಗಿ ಸೂಕ್ತ ದಾಖಲೆಗಳನ್ವಯ ಪ್ರಾಚಾರ್ಯರ ಮುಖಾಂತರ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಅಧೀಕ್ಷಕರು ಪರೀಕ್ಷಾ ವಿಭಾಗ ಕ.ವಿ.ವಿ.ಧಾರವಾಡ. ಇವರಿಗೆ ಸಲ್ಲಿಸುವುದು. ಕಾರಣ, ಸದರ ವಿಷಯವನ್ನು ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸಲು ಹಾಗೂ ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ.

10/1

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1. ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಂತರ್ಜಾಲದಲ್ಲಿ ಪ್ರಕಟಿಸುವುದು)
3. ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.